<u>ಕರ್ನಾಟಕ ವಿಧಾನ ಪರಿಷತ್ತು</u>

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1780
ವಿಧಾನ ಪರಿಷತ್ತು ಸದಸ್ಯರ ಹೆಸರು : ಶ್ರೀ ಐವನ್ ಡಿ'ಸೋಜಾ (ವಿಧಾನಸಭೆಯಿಂದ ಚುನಾಯಿತರಾದವರು)
ಉತ್ತರಿಸಬೇಕಾದ ದಿನಾಂಕ : 23.03.2026
ಉತ್ತರಿಸುವ ಸಚಿವರು : ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ ಇಲಾಖೆ ಸಚಿವರು

<table>
<tr><th>ಕ್ರ ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ</td><td>ರಾಜ್ಯದಲ್ಲಿ ಹೊಸದಾಗಿ ಪಡಿತರ ಚೀಟಿ ಪಡೆಯಲು ಅರ್ಜಿ ಕರೆಯದೇ ಎಷ್ಟು ಸಮಯವಾಗಿದೆ;</td><td>2023ನೇ ಸಾಲಿನಿಂದ ಹೊಸದಾಗಿ ಪಡಿತರ ಚೀಟಿ ಪಡೆಯಲು ಅರ್ಜಿಯನ್ನು ಆಹ್ವಾನಿಸಿರುವುದಿಲ್ಲ. ಆದರೆ ವೈದ್ಯಕೀಯ ತುರ್ತು ಪರಿಸ್ಥಿತಿ ಹಿನ್ನೆಲೆ ಇರುವವರು, ಇ-ಶ್ರಮ್ ನೋಂದಾಯಿತ ಕಾರ್ಮಿಕರಿಗೆ ಹಾಗೂ ಅತ್ಯಂತ ದುರ್ಬಲ ವರ್ಗದ ಬುಡಕಟ್ಟು ಜನಾಂಗದವರಿಗೆ ನಿರಂತರವಾಗಿ ಆದ್ಯತಾ ಪಡಿತರ ಚೀಟಿ ನೀಡಲು ಕ್ರಮವಹಿಸಲಾಗಿರುತ್ತದೆ.<br>ಸರ್ಕಾರದ ಆದೇಶ ಸಂಖ್ಯೆ: ಇ-ಆನಾಸ 159 ಡಿಆರ್‌ಎ 2025 ದಿನಾಂಕ: 30.10.2025 ರಲ್ಲಿ ರಾಜ್ಯದಲ್ಲಿರುವ ಅನರ್ಹ ಆದ್ಯತಾ ಪಡಿತರ ಚೀಟಿಗಳನ್ನು ಪತ್ತೆ ಹಚ್ಚಿ ಸದರಿ ಅನರ್ಹ ಆದ್ಯತಾ ಪಡಿತರ ಚೀಟಿಗಳನ್ನು ಆದ್ಯತೇತರ ಪಡಿತರ ಚೀಟಿಗಳನ್ನಾಗಿ (NPHH) ಪರಿವರ್ತಿಸಲು ಹಾಗೂ ಈ ರೀತಿ ಪರಿವರ್ತಿಸಿದ ಪ್ರಮಾಣಕ್ಕೆ ಅನುಗುಣವಾಗಿ ಅಷ್ಟೇ ಪ್ರಮಾಣದ ಆದ್ಯತಾ ಪಡಿತರ ಚೀಟಿಗಳನ್ನು (PHH) ಬಡತನ ರೇಖೆಗಿಂತ ಕೆಳಗಿರುವ ಅರ್ಹ ನಾಗರಿಕರಿಗೆ ವಿತರಿಸಲು ಅಗತ್ಯ ಕ್ರಮಕೈಗೊಳ್ಳಲಾಗುತ್ತಿದೆ.</td></tr>
<tr><td>ಆ</td><td>ಇನ್ನೂ ಅನೇಕ ಕುಟುಂಬಗಳಿಗೆ ಯಾವುದೇ ಬಿಪಿಎಲ್, ಎಪಿಎಲ್ ಪಡಿತರ ಚೀಟಿ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;</td><td>ದಿನಾಂಕ 28.11.2025 ರ ಅಂತ್ಯಕ್ಕೆ ರಾಜ್ಯದಲ್ಲಿ ಆದ್ಯತಾ ಪಡಿತರ ಚೀಟಿ ಕೋರಿ ಈಗಾಗಲೇ ಸಲ್ಲಿಸಿರುವ ಒಟ್ಟು 3,36,982 ಅರ್ಜಿಗಳ ಸ್ಥಳ ತನಿಖೆ ಕಾರ್ಯ ನಡೆಸಿ ಅರ್ಹರಿರುವ ಅರ್ಜಿದಾರರಿಗೆ ನಿಯಮಾನುಸಾರ ಆದ್ಯತಾ ಪಡಿತರ ಚೀಟಿ ವಿತರಣೆ ಮಾಡಲು ಕ್ರಮವಹಿಸಲಾಗಿರುತ್ತದೆ.</td></tr>
<tr><td>ಇ</td><td>ಪ್ರಸ್ತುತ ಚಾಲ್ತಿಯಲ್ಲಿರುವ ಬಿಪಿಎಲ್ /ಎಪಿಎಲ್/ಅಂತ್ಯೋದಯ ಪಡಿತರ ಚೀಟಿಗಳ ಸಂಖ್ಯೆ ಎಷ್ಟು;</td><td>
<table>
<tr><th>ವಿವರ</th><th>ಪಡಿತರ ಚೀಟಿಗಳ ಸಂಖ್ಯೆ</th><th>ಫಲಾನುಭವಿಗಳ ಸಂಖ್ಯೆ</th></tr>
<tr><td>ಅಂತ್ಯೋದಯ ಅನ್ನ ಪಡಿತರ ಚೀಟಿಗಳು</td><td>10,47,080</td><td>42,76,526</td></tr>
<tr><td>ಆದ್ಯತಾ ಪಡಿತರ ಚೀಟಿಗಳು</td><td>1,14,38,886</td><td>4,00,46,744</td></tr>
</table>
</td></tr>
</table>

| | | | | |
|---|---|---|---|---|
| | | ಅದ್ಯತೇತರ ಪಡಿತರ ಚೀಟಿಗಳು | 29,71,601 | 1,02,18,470 |
| | | | 1,54,57,567 | 5,45,41,740 |
| ಈ | ಪಡಿತರ ಚೀಟಿ ಇಲ್ಲದೇ ಆರೋಗ್ಯ ಸೇವೆ, ವಿವಿಧ ಯೋಜನೆಗಳ ಲಾಭ ಪಡೆಯಲು ಸಾಧ್ಯವಾಗದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? | ಇಲಾಖೆಯು ಜಿಲ್ಲೆಗಳಿಂದ ಸ್ವೀಕೃತವಾಗುವ ಪ್ರಸ್ತಾವನೆಯನ್ನಾಧರಿಸಿ 102 ಗಂಭೀರ ಕಾಯಿಲೆಗಳನ್ನು ಗುರುತಿಸಿ ವೈದ್ಯಕೀಯ ತುರ್ತು ಪ್ರಕರಣಗಳಿಗಾಗಿ ಪ್ರತ್ಯೇಕವಾದ Module ಅನ್ನು ಅಭಿವೃದ್ಧಿಪಡಿಸಲಾಗಿರುತ್ತದೆ.<br>ಪ್ರಸ್ತುತ ವೈದ್ಯಕೀಯ ತುರ್ತು Module ಆಹಾರ ತಂತ್ರಾಂಶದಲ್ಲಿ ದಿನಾಂಕ:24.10.2025 ರಿಂದ ಸಾರ್ವಜನಿಕ ಬಳಕೆಗೆ ಲಭ್ಯವಿರುತ್ತದೆ.<br>ಈ ಹೊಸ ಮಾಡ್ಯೂಲ್ ಮೂಲಕ, ಇಲಾಖೆಯಿಂದ ಗುರುತಿಸಲಾದ 102 ಗಂಭೀರ ಕಾಯಿಲೆಗಳ ಚಿಕಿತ್ಸೆಗಾಗಿ ಆದ್ಯತಾ ಪಡಿತರ ಚೀಟಿಗೆ ಫಲಾನುಭವಿಗಳು ಅರ್ಜಿ ಸಲ್ಲಿಸಬಹುದಾಗಿರುತ್ತದೆ.<br>ಅರ್ಜಿಯನ್ನು ಸಲ್ಲಿಸಿದ ನಂತರ ಸಂಬಂಧಿಸಿದ ಆಹಾರ ನಿರೀಕ್ಷಕರು ವೈದ್ಯಕೀಯ ದಾಖಲೆಗಳನ್ನು ಮತ್ತು ಸ್ಥಳ ಪರಿಶೀಲನೆಯನ್ನು ಜರುಗಿಸಿ, ಅರ್ಜಿದಾರರು ಅರ್ಹರೆಂದು ಕಂಡು ಬಂದಲ್ಲಿ ತಮ್ಮ ಸ್ಥಳ ಪರಿಶೀಲನೆ ವರದಿ ಮತ್ತು ಫೋಟೋದೊಂದಿಗೆ ಸಂಬಂಧಿಸಿದ ಜಿಲ್ಲೆಯ ಜಂಟಿ/ಉಪ ನಿರ್ದೇಶಕರಿಗೆ ಆನ್‌ಲೈನ್ ಮೂಲಕ ಕಳುಹಿಸಿ ಅನುಮೋದನೆ ಪಡೆದು ಹೊಸ ಪಡಿತರ ಚೀಟಿಯನ್ನು ವಿತರಿಸಬಹುದಾಗಿರುತ್ತದೆ. | | |

ಇ-ಆನಾಪ 103 ಡಿಆರ್‌ಎ 2026

(ಕೆ.ಹೆಚ್. ಮುನಿಯಪ್ಪ)
ಆಹಾರ, ನಾಗರಿಕ ಸರಬರಾಜು ಮತ್ತು
ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು
ಮಾಪನಶಾಸ್ತ್ರ ಇಲಾಖಾ ಸಚಿವರು